**ಮಾನ್ಯ ಮುಖ್ಯಮಂತ್ರಿಯವರು ಕನ್ನಡ ಪ್ರಭಾ ಸುದ್ದಿ ಪತ್ರಿಕೆಗೆ ನೀಡಿದ ಸಂದರ್ಶನದ ಮುಖ್ಯಾಂಶಗಳು**

# ನಾನೇಕೆ ಖಾಸಗಿ ಸಾಲ ಮನ್ನಾ ಮಾಡಿದೆ?

■ ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ

ರಾಜ್ಯದಲ್ಲಿ ಮತ್ತೊಂದು ಚುನಾವಣೆ ಬಂದಿತ್ತು. ಪಕ್ಷವನ್ನು ಅಧಿಕಾರಕ್ಕೆ ತರಲು ಕಾಲಿಗೆ ಚಕ್ರವನ್ನು ಕಟ್ಟಿಕೊಂಡು ರಾಜ್ಯವನ್ನು ಸುತ್ತುತ್ತಿದ್ದೆ. ಜನರ ನೋವಿಗೆ ದನಿಯಾಗಲು ಬಯಸಿ ದಿನ ನಿತ್ಯವೂ ಸಾವಿರಾರು ಜನರನ್ನು ಭೇಟಿಯಾಗುತ್ತಿದ್ದೆ. ಎಲ್ಲರದ್ದೂ ಒಂದೊಂದು ಸಮಸ್ಯೆ. ಎಲ್ಲವನ್ನೂ ಗಮನದಲ್ಲಿಟ್ಟು ಕೇಳುತ್ತಿದ್ದೆ. ನಡುನಡುವೆ ಅವರ ನೋವಿಗೆ ದನಿಯಾಗುತ್ತಿದ್ದೆ. ಎಲ್ಲವನ್ನೂ ಸಮಚಿತ್ತದಿಂದ ಕೂತು ಆಲಿಸುತ್ತಿದ್ದೆ. ಜೊತೆಗೆ ಅವುಗಳನ್ನು ದಾಖಲಿಸಿ ಇಟ್ಟುಕೊಳ್ಳುತ್ತಿದ್ದೆ. ಅನೇಕ ಸಮಸ್ಯೆಗಳ ನಡುವೆ ನನ್ನನ್ನು ತೀವ್ರವಾಗಿ ಕಾಡಿದ್ದು ರೈತರ ಆತ್ಮಹತ್ಯೆ.

ಅದರಲ್ಲೂ ನನ್ನ ಮನ ಕರಗಿಸಿದ್ದು ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಒಂದು ಘಟನೆ. ಮೇ ತಿಂಗಳ ಬಿರು ಬೇಸಿಗೆಯ ದಿನವದು. ಮತಯಾಚನೆಯೊಂದಿಗೆ ಜನರ ಕಷ್ಟಸುಖಗಳನ್ನು ವಿಚಾರಿಸಿಕೊಳ್ಳುತ್ತಿದ್ದೆ. ಆಗೊಬ್ಬ ಮಹಿಳೆ, ಜನಸಂದಣಿ ನಡುವೆ ಕಷ್ಟಪಟ್ಟು ನುಸುಳಿಕೊಂಡು ನನ್ನ ಕಡೆಗೆ ಬಂದಳು. ದಿಟ್ಟಿಸಿ ನೋಡಿದೆ. ಬಸವಳಿದಿದ್ದಳು. ಮುಖ ಕಪ್ಪಿಟ್ಟಿತ್ತು. ತಲೆಗೂದಲು ಕೆದರಿತ್ತು. ಹಣೆಯಲ್ಲಿ ಕುಂಕುಮ ಇರಲಿಲ್ಲ. ಬಳಿ ಬಂದವಳೇ ಕಣ್ಣೀರಿಟ್ಟಳು. ಬದುಕು ಹಿಂಸೆಯಾಗಿದೆ, ನಮ್ಮನ್ನು ಉಳಿಸಿ ಎಂದು ಸೆರಗೊಡ್ಡಿದಳು. ನಡು ನಡುವೆ ನಿಟ್ಟುಸಿರಿಡುತ್ತಾ, 'ನನ್ನ ಗಂಡ ಕೈಸಾಲ ಮಾಡಿದ್ದ. ಎರಡು ಲಕ್ಷ ರುಪಾಯಿ. ಅದು ಹನುಮಂತನ ಬಾಲದಂಗೆ ನಾಲ್ಕು ಲಕ್ಷ ರುಪಾಯಿಗೆ ಏರಿತ್ತು. ನಿತ್ಯವೂ ಸಾಲಗಾರರ ಕಾಟ. ಕುಂತರೆ ನಿಂತರೆ ಬಿಡದೆ ಕಾಟ ಕೊಡುತ್ತಿದ್ದರು. ಮನೆಯಲ್ಲಿ ಇದ್ದುಬದ್ದದ್ದನ್ನೆಲ್ಲ ಎತ್ತಿಕೊಂಡು ಹೋದರು. ಉಳುವ ಎತ್ತುಗಳನ್ನೂ ಬಿಡಲಿಲ್ಲ. ಹೊಲಕ್ಕೆ ಹೋಗಿ ವಿಷ ಕುಡಿದ..' ಎನ್ನುತ್ತಲೇ ಎದೆ ಬಡಿಕೊಂಡಳು. ಮನಸ್ಸಿಗೆ ನೋವಾಯಿತು. ಸರ್ಕಾರ ನಿಮಗೆ ಸಹಾಯ ಮಾಡಲಿಲ್ಲವೇನಮ್ಮ ಎಂದು ಕೇಳಿದೆ. ಅದೇನೇನೋ ಕಾಗದಪತ್ರ ಕೇಳಿದರು. ಅವನ್ನೆಲ್ಲ ಎಲ್ಲಿಂದ ತರಲಿ? ಬಿಡಿಗಾಸೂ ನೆರವು ಸಿಕ್ಕಲಿಲ್ಲ ಎಂದು ಬಿಕ್ಕಿದಳು. ನನ್ನಂತೆ ನನ್ನ ಮಗಳ ಗಂಡನೂ ಶಿವನ ಪಾದ ಸೇರಿದ್ದಾನೆ. ಮೊಮ್ಮಗಳು ಶಾಲೆಗೆ ಹೋಗುತ್ತಿದ್ದಾಳೆ. ಇಡೀ ಹೆಣ್ಣುಸಂತಾನವನ್ನು ಸಾಕುವ ಜವಾಬ್ದಾರಿ ನನ್ನ ಹೆಗಲಿಗೆ ಬಿದ್ದಿದೆ ಎಂದಳು. ಮರುಗಿದೆ. ನಂತರ ಆಕೆಯ ಕಷ್ಟಕ್ಕೆ ತಕ್ಷಣದ ಸಹಾಯ ಮಾಡುವಂತೆ ನನ್ನ ಜೊತೆಯಲ್ಲಿದ್ದವರಿಗೆ ಹೇಳಿದೆ. ಅವಳನ್ನೇ ನೆನೆಯುತ್ತಾ ಮುಂದೆ ನಡೆದೆ.



ಮುಖ್ಯಮಂತ್ರಿ ಲೇಖನ

ಇದು ಅವಳೊಬ್ಬಳ ಕಥೆಯಲ್ಲ. ಇಂಥ ನೂರಾರು ಘಟನೆಗಳು ರಾಜ್ಯದ ಉದ್ದಕ್ಕೂ ಕೇಳಲು, ನೋಡಲು ಸಿಗುತ್ತವೆ. ಆದರೆ, ನಾನು ಆ ಮಳವಳ್ಳಿ ತಾಲೂಕಿನ ರೈತ ಮಹಿಳೆಯ ಮಾತು ಕೇಳಿ ಅಂದೇ ಮನಸ್ಸು ಮಾಡಿದ್ದೆ. ಮುಖ್ಯಮಂತ್ರಿಯಾದ ತಕ್ಷಣವೇ ರೈತರ ಸಾಲಕ್ಕೆ ಪರಿಹಾರ ಕಂಡುಹಿಡಿಯಬೇಕೆಂದು ನಿರ್ಧರಿಸಿದೆ.

## ಹುಬ್ಬಳ್ಳಿಯಲ್ಲಿ ನಡೆದ ಘಟನೆ

ಇತ್ತೀಚೆಗೆ ಮುಖ್ಯಮಂತ್ರಿಯಾದ ನಂತರ ಹುಬ್ಬಳ್ಳಿಗೆ ಭೇಟಿ ನೀಡಿದ ವೇಳೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಮನೆಗೆ ಹೋಗಿದ್ದೆ. ಹುಬ್ಬಳ್ಳಿ ಒಂದು ರೀತಿ ನನಗೆ ಎರಡನೇ ಮನೆ ಇದ್ದ ಹಾಗೆ. ಮುಖ್ಯಮಂತ್ರಿಯಾಗಿದ್ದರೂ ನನ್ನೊಂದಿಗೆ ಜನರ ಒಡನಾಟ ತಪ್ಪಿರಲಿಲ್ಲ. ಅಂದು ಕೂಡ ಹುಬ್ಬಳ್ಳಿಯಲ್ಲಿ ನರಗುಂದದ ಮಹಿಳೆಯೊಬ್ಬಳು ನನಗೆ ಸಾಲದ ಇನ್ನೊಂದು ಕರಾಳ ಮುಖದ ದರ್ಶನ ಮಾಡಿಸಿದಳು.

ಈಕೆಗೊಬ್ಬ ಗಟ್ಟಿಮುಟ್ಟಾದ ಮಗನಿದ್ದ. ಮನೆ ಚೆನ್ನಾಗಿ ನಡೆಯುತ್ತಿತ್ತು. ಮನೆಯನ್ನೂ ಕಟ್ಟಿಕೊಂಡಿದ್ದರು. ಇನ್ನೇನು, ಬದುಕು ದಡ ಮುಟ್ಟಿತು ಎನ್ನುವಾಗಲೇ ಒಂದು ಅವಘಡ ಸಂಭವಿಸಿತ್ತು.

↘ 8

